ॐ

ISSN 2250-1711

सत्यं ज्ञानमनन्तम्

# Journal of Veda Samskṛta Academy

**Recognised in the UGC-CARE List**


**A National Peer-Reviewed Research Journal**

विश्वविद्यालय–अनुदान–आयोगेन केर सूच्यां मानिता

मूल्याङ्किता राष्ट्रियसंशोधनपत्रिका

Volume : XXI

January to June - 2023



श्रीमृडेश्वर देवः, मुर्डेश्वर, उत्तरकन्नड, कर्नाटक

॥ त्र्यंबकं यजामहे सुगंधिं पुष्टिवर्धनम् । उर्वारुकमिव बंधनात् मृत्योर्मुक्षीय मामृतात् ॥

*Edited by the Director :*

**Dr. Gopalkrishna Hegde**

Jyotishashastra-Dharmashastra Vidwan

**VEDA SAMSKRITA ACADEMY (R.)**

Kalkod Road, Hegde - 581330, KUMTA, Uttara Kannada, Karnataka.

ISSN 2250-1711

॥ सत्यं ज्ञानमनन्तम् ॥

# JOURNAL OF VEDA SAMSKRITA ACADEMY

# जर्नल् आफ् वेद संस्कृत अकाडेमि

**Recognised in the UGC-CARE List**

**A NATIONAL PEER-REVIEWED RESEARCH JOURNAL**

विश्वविद्यालय-अनुदान-आयोगेन केर सूच्यां मानिता

मूल्याङ्किता राष्ट्रियसंशोधनपत्रिका

**VOLUME: XXI**

**January to June – 2023**

Editor in Chief :

**DR. GOPALKRISHNA HEGDE**

[Jyotishashastra-Dharmashastra Vidwan]

**VEDA SAMSKRITA ACADEMY (Regd.)**

Formerly : Veda Samskrita Prasarinee Sabha (R.)

Regd. No. : DR : SOR : 108 : 2003-04, Dated : 30-10-2003

Registered under Societies Registration Act, of Karnataka-1960

**Registered office address :**

# 1347, Kalkod Road, HEGDE-581330, Kumta, Uttarakannada, Karnataka, India

E-mail ID : **vedasmkac@gmail.com**

Website : **www.vedasamskritaacademy.org**

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

Title of the Journal : **Journal of Veda Samskrita Academy**

Recognised in the UGC-CARE List

A National Peer-Reviewed Research Journal

**जर्नल् आफ् वेद संस्कृत अकाडेमि**

विश्वविद्यालय-अनुदान-आयोगेन केर सूच्यां मानिता

मूल्याङ्किता राष्ट्रियसंशोधनपत्रिका

**ISSN : 2250-1711**

Editor & Publisher : **Dr. Gopalkrishna Hegde**
gopalkrishnh9@gmail.com
9741847399
Director,
Veda Samskrita Academy (Regd.)
Kalkod Road, HEGDE- 581330
Kumta, Uttara Kannada, Karnataka
web site : www.vedasamskritaacademy.org
E-mail : vedasmkac@gmail.com

**All rights are Reserved with the Publisher**

**" All opinion / views expressed in the research papers are of the authors only, no way they are ascribed to the Academy"**

Languages : Samskrita, Kannada, English, Hindi

Imprint : Volume XXI, January to June – 2023

Paper : 70gsm (B2B) and Art paper – 300gsm

Size of the Journal : A4

Number of Pages : 516 + 14 + 3 (colour page)

Number of Copies : 200

D. T. P. : Chanda Graphics, Kumta

Art works : Girish R. Bhat, Digital World, Kumta

Printing & : Shiva Offset Printers, Kumta

Binding : Shri Krishna Mudranalaya, Hegde

Price : **1000/- Rs.**

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

| | | |
|---|---|---|
| 27. | Geographical Concept of BHĀRATVARṢA mentioned in KĀVYAMĪMĀṂSĀ OF RĀJAŚEKHARA<br>Dr. Mahua Mandal, Research Scholar, Shantiniketan, West Bengal- 9635734452 | 337-342 |
| 28. | Study of Agricultural Science in Sanskrit Literature<br>Dr. Sankar Chatterjee, Associate Professor , Cooch Behar ,West Bengal- 8017625344 | 343-346 |
| 29. | No-Soul theory of Buddha<br>Dr. Charu Das, Associate Professor, Guwahati, Assam- 9864031204 | 347-351 |
| 30. | NEP-2020 In the light of Ancient Education System<br>Pinki Paul, Assistant Professor, Alipurduar, West Bengal- 9046844660 | 352-355 |
| 31. | General principles of the *Mīmāṃsā* law: a psychological study<br>Mr. Supriya Roy, Assistant Professor, Murshidabad, West Bengal - 9093765087 | 356-359 |
| 32. | Divine Birth of Lord Buddha : In the light of Buddhacarita<br>Dr. Arnab Patra, Assistant Professor, Asutosh College, Kolkata, W. B.- 9433171048 | 360-362 |
| 33. | Gender mainstreaming and soap opera : Conception or Misconception<br>Deboleena Dutta, State Aided College Teacher, West Bengal, 9126703976 | 363-366 |
| 34. | Upanishad literature in the unveiling of human emotion<br>Jubin Yasmin, Assistant professor, Kolkata, West Bengal- 9832694844 | 367-370 |
| 35. | Women in post colonial twentieth century Indian english fiction : A selective and graphical study of three decades<br>Prof. Sangeeta Singh, Dept. of English, Kota, Rajasthana- 9414331103 | 371-374 |
| 36. | Brave New Women in Brave New World with Reference to Divakaruni's *The Mistress of Spices*<br>Dr. J. Nasreen Banu, Assistant Professor of English, Tiruchengode, 9894553454 | 375-377 |


## हिन्दीविभाग


| | | |
|---|---|---|
| 1. | मैत्रेयी पुष्पा के कहानियों में स्त्री – मुक्ति संदेश<br>डा. कृष्णा डी लमाणि, सहायक प्राध्यापक, हिंदी अध्ययन विभाग, बेंगलूरु, कर्नाटक- 8618152900 | 379-383 |
| 2. | सर्वेश्वरदयाल सक्सेना की कविता एवं आलोचनात्मक संदर्भ<br>डा. एम्. अब्दुल रजाक, सहायक प्राध्यापक, बेंगलूरु, कर्नाटक- 9493405942, 8919113820 | 384-388 |
| 3. | मन्नेरवारलू जनजातिऔर समकालीन जीवन<br>डॉ. गणशेटवार साईनाथ नागनाथ, सहायक प्राध्यापक - हिन्दी विभाग, बेंगलूरू, कर्नाटक - 7598438956 | 389-393 |
| 4. | उग्र जी की कतिपय कहानियों में राष्ट्रीय चेतना के स्वर<br>डॉ. मनोज कुमार दुबे, हिंदी सहायकाचार्य, मुंबई , महाराष्ट्र- 9920287301 | 394-398 |
| 5. | अथर्ववेदीय ब्रह्मबिन्दूपनिषद् का दार्शनिक तत्त्वज्ञान<br>डॉ. प्रियंककुमार एन. रावल, सहायक अध्यापक, वल्लभ विद्यानगर, गुजरात- 7984896914 | 399-403 |
| 6. | कन्नड साहित्य में दास साहित्य और संगीत<br>डा. महमद नयास पाशा, हिन्दी विभाग, बेंगलूरू, कर्नाटक - 9632783783 | 404-407 |
| 7. | 'कोमल गांधार' नाटक में चित्रित 'नारी'<br>विनोद बाबुराव मेघशाम, बेङ्गलूरु, कर्नाटक- 9008467187 | 408-412 |


## ಕನ್ನಡ ವಿಭಾಗ


| | | |
|---|---|---|
| 1. | ಬೆಳ್ವೊಲನಾಡಿನ ಶಾಸನಗಳಲ್ಲಿ ಧರ್ಮ ಸಮನ್ವತೆ<br>ಡಾ. ಶರಣಪ್ಪ ಬಸಪ್ಪ ಜಗ್ಗಲ್, ಇತಿಹಾಸ ಉಪನ್ಯಾಸಕರು, ಹಾವೇರಿ, ಕರ್ನಾಟಕ– 8884608967 | 413-417 |
| 2. | ವಚನ ವಿಮರ್ಶೆಗಳು : ಅಲಂಕಾರಶಾಸ್ತ್ರದ ನೆಲೆ<br>ಡಾ. ಅಂದಯ್ಯ ಅರವಟಗಿಮಠ, ಕನ್ನಡ ಉಪನ್ಯಾಸಕರು, ಗದಗ, ಕರ್ನಾಟಕ– 7406745526 | 418-420 |
| 3. | ವಿವೇಕಾನಂದರ ಚಿಂತನೆಯಲ್ಲಿ ವರ್ಣ ಮತ್ತು 'ಜಾತಿ ವ್ಯವಸ್ಥೆ'<br>ಡಾ. ವೀಣಾ ಈ., ಸಹ ಪ್ರಾಧ್ಯಾಪಕರು, ಗದಗ, ಕರ್ನಾಟಕ– 9113058404 | 421-425 |


CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

| | | |
|---|---|---|
| 4. | ಕನ್ನಡದಲ್ಲಿ ಪುರಾಣ ಕಾವ್ಯಗಳ ಸ್ವರೂಪ<br>ಡಾ. ಎ. ವಿ. ದೇವಾಂಗಮಠ, ಕನ್ನಡ ಸಹ ಪ್ರಾಧ್ಯಾಪಕರು, ಗದಗ, ಕರ್ನಾಟಕ- 9880042365 | 426-42[illegible] |
| 5. | ಒಂದು ಅಪೂರ್ವ ವೀರಗಲ್ಲು<br>ಡಿ. ವೀರೇಶ, ಸಂಶೋಧನಾ ವಿದ್ಯಾರ್ಥಿ, ಹಂಪಿ, ಕರ್ನಾಟಕ, 7760552636 | 429-431 |
| 6. | ಹದಿಹರೆಯದ ಮಕ್ಕಳಲ್ಲಿ 'ಆತ್ಮಾಭಿಮಾನ'<br>ಡಾ. ವಂದನಾ ಜೈನ್, ಸಹಾಯಕ ಪ್ರಾಧ್ಯಾಪಕಿ, ಉಜಿರೆ- 9449728668<br>ಡಾ. ಮೈತ್ರಿ ಭಟ್, ಸಹಾಯಕ ಪ್ರಾಧ್ಯಾಪಕಿ, ಪುತ್ತೂರು 9449793584 | 432-435 |
| 7. | ವಲಸೆ ಪ್ರಜ್ಞೆ : ಜನನಿ ಜನ್ಮಭೂಮಿ<br>ಡಾ. ಬಸಯ್ಯ ಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಬೆಂಗಳೂರು, ಕರ್ನಾಟಕ- 9482948320 | 436--440 |
| 8. | ವೀರಶೈವ ಮತ ಮತ್ತು ತಾತ್ವಿಕ ವಿಚಾರಗಳು<br>ಡಾ. ಹೆಚ್. ಎಸ್. ವಿರೋಪಾಕ್ಷಪ್ಪ, ಸಹ ಪ್ರಾಧ್ಯಾಪಕರು, ಹೊಳೆಹೊನ್ನೂರು, ಕರ್ನಾಟಕ- 9482754792 | 441-444 |
| 9. | ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಧಾರವಾಡ ಪ್ರದೇಶದ ಕನ್ನಡದ ಸ್ಥಿತಿ-ಗತಿ<br>ಡಾ. ವಿಠ್ಠಲ ಕೋಳಿ, ಸಹಾಯಕ ಪ್ರಾಧ್ಯಾಪಕರು, ಗದಗ, ಕರ್ನಾಟಕ- 9164645055 | 445-448 |
| 10. | ವಸಾಹತುಕಾಲಿನ ಸೊಲ್ಲಾಪುರ : ಜಯದೇವಿತಾಯಿ ಲಿಗಾಡೆಯವರ ಕನ್ನಡಪರ ಹೋರಾಟ<br>ಡಾ. ಸಿಂಗಮ್ಮ ಗದಗ, ಸಹಾಯಕ ಪ್ರಾಧ್ಯಾಪಕರು, ಗದಗ, ಕರ್ನಾಟಕ- 9632566328 | 449-451 |
| 11. | ವಿಕ್ರಮ ವಿಸಾಜಿ ಕವಿತೆಗಳಲ್ಲಿ ಸಾಮಾಜಿಕ ಪ್ರಜ್ಞೆ<br>ಕಿರಣ ವಲ್ಲೇಪುರೆ, ಸಂಶೋಧನಾ ವಿದ್ಯಾರ್ಥಿ, ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ, ಕರ್ನಾಟಕ | 452-454 |
| 12. | ಶಿಲ್ಪಕಲಾ ಸಂಸ್ಕೃತಿಗೆ ಶಿವಾರಪಟ್ಟಣದ ಕೊಡುಗೆ<br>ಡಾ. ಸರ್ವೇಶ ಬಿ. ಎಸ್., ಮುಖ್ಯಸ್ಥರು, ಕನ್ನಡ ವಿಭಾಗ, ಬೆಂಗಳೂರು, ಕರ್ನಾಟಕ- 9738482935 | 455-458 |
| 13. | ನಾಟ್ಯಶಾಸ್ತ್ರ : ಅಭಿನಯ ಪದ್ಧತಿ ಕುರಿತು ವಿಚಾರ<br>ಡಾ.ರವಿಶಂಕರ ಎ. ಕೆ., ಸಹಾಯಕ ಪ್ರಾಧ್ಯಾಪಕರು, ಕೆ. ನಾರಾಯಣಪುರ, ಕರ್ನಾಟಕ- 9663433403 | 459-462 |
| 14. | ಜನಪದರು : ಸಾವಿರದ ನಂಬಿಕೆಗಳು<br>ಪ್ರೊ. ಚಂದ್ರಶೇಖರ್. ಎನ್., ಸಹಾಯಕ ಪ್ರಾಧ್ಯಾಪಕರು, ಬೆಂಗಳೂರು, ಕರ್ನಾಟಕ- 9916465100 | 463-467 |
| 15. | ಸಂಸ್ಕೃತ ಮಹಾಕಾವ್ಯಗಳ ಉದ್ಭವ ಮತ್ತು ವಿಕಾಸ<br>ಡಾ.ಸೈಯದ್ ಮುಯಿನ್, ಕನ್ನಡ ಸಹಾಯಕ ಪ್ರಾಧ್ಯಾಪಕ, ಬೆಂಗಳೂರು, ಕರ್ನಾಟಕ- 9972925077 | 468-470 |
| 16. | ಅಂಬಿಕಾತನಯದತ್ತರ 'ಕನ್ನಡ ಮೇಘದೂತ': ಒಲವಿನ ಚಿಂತನೆ<br>ಅನಿತ ಕೆ. ವಿ., ಸಹಾಯಕ ಪ್ರಾಧ್ಯಾಪಕರು, ಬೆಂಗಳೂರು, ಕರ್ನಾಟಕ,- | 471-474 |
| 17. | ಸಿನಿಮಾ ಯಾನದಲ್ಲಿ ಸಿರಿಯಾಳ ಸಂಕಥನ ('ಭಕ್ತ ಸಿರಿಯಾಳ'ಸಿನಿಮಾ ಕುರಿತ ವಿಶ್ಲೇಷಣೆ)<br>ಡಾ. ಎಂ. ಭೈರಪ್ಪ, ಕನ್ನಡ ಸಹಾಯಕ ಪ್ರಾಧ್ಯಾಪಕ, ಬೆಂಗಳೂರು, ಕರ್ನಾಟಕ, 9741436723 | 475-479 |
| 18. | ಚಾಣಕ್ಯನ ನೀತಿಸೂತ್ರ : ಆಡಳಿತ ನೀತಿ ಸಂಹಿತೆಯ ಅಧ್ಯಯನ ಮತ್ತು ಅದರ ಪ್ರಸ್ತುತತೆ<br>ಡಾ. ದೀಕ್ಷಿತ್ ಕುಮಾರ್ ಎಂ., ಸಹಾಯಕ ಪ್ರಾಧ್ಯಾಪಕ, ಬೆಂಗಳೂರು, ಕರ್ನಾಟಕ, 9740360317 | 480-482 |
| 19. | ಕಾರಂತ ಕಥನ ಮತ್ತು ಮಹಿಳಾ ಜಗತ್ತು<br>ಡಾ. ಶುಭಾ ಮರವಂತೆ, ಸಹ ಪ್ರಾಧ್ಯಾಪಕರು, ಶಿವಮೊಗ್ಗ, 9448560118 | 483-486 |
| 20. | ಕುಮಾರ ಸಂಭವ ಮತ್ತು ಗಿರಿಜಾ ಕಲ್ಯಾಣ : ಒಂದು ಅವಲೋಕನ<br>ಡಾ. ಗೋವಿಂದರಾಯ ಎಂ, ಕನ್ನಡ ಸಹ ಪ್ರಾಧ್ಯಾಪಕರು, ಕುಣಿಗಲ್, ಕರ್ನಾಟಕ- 8711999638 | 487-491 |
| 21. | ಮಹಾಭಾರತದಲ್ಲಿ ವಿದುರನೀತಿ<br>ಡಾ. ರೇಖಾದೇವಿ ಹೆಚ್. ಎಸ್., ಸಹಾಯಕ ಪ್ರಾಧ್ಯಾಪಕರು, ಕ. ಸಂ. ವಿ., ಬೆಂಗಳೂರು- 9591071457 | 492-494 |
| 22. | ಗೀತಾ ನಾಗಭೂಷಣ ಅವರ ಬದುಕು ಕಾದಂಬರಿಯ ಲೋಕ<br>ಡಾ. ಮಲ್ಲಯ್ಯ ಸಂಡೂರು, ಅಧ್ಯಾಪಕರು, ಸಂಡೂರು, ಬಳ್ಳಾರಿ, 9481046934 | 495-498 |
| 23. | ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟು ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಂಕಥನಗಳು<br>ಡಾ. ಪಾರ್ವತಮ್ಮ ವಿ., ಅತಿಥಿ ಉಪನ್ಯಾಸಕರು, ರಾಜ್ಯಶಾಸ್ತ್ರ ವಿಭಾಗ, ಬಳ್ಳಾರಿ, ಕರ್ನಾಟಕ- 8861676806 | 499-502 |
| 24. | ಚಲನಚಿತ್ರಗಳಲ್ಲಿ ಮಹಿಳಾ ಅಭಿವ್ಯಕ್ತಿ ಮಾದರಿಗಳು<br>ಡಾ. ಯರ್ರಿಸ್ವಾಮಿ, ಈ. ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಶ್ವವಿದ್ಯಾಲಯ, ಹಂಪಿ- 9481715062 | 503-506 |
| 25. | 'ಆಚಾರ'ಕ್ಕೆ ಸಂಬಂಧಿಸಿದ ವಿಚಾರಗಳ ವಿಶ್ಲೇಷಣೆ<br>ಡಾ. ಶ್ರೀಧರ್ ಪಿ. ಡಿ., ಪ್ರಾಧ್ಯಾಪಕರು, ಹಿಂದಿ ಅಧ್ಯಯನವಿಭಾಗ, ಬೆಂಗಳೂರು, ಕರ್ನಾಟಕ- 9448123187 | 507-511 |
| 26. | ವೃಕ್ಷ ವಿಜ್ಞಾನ<br>ಡಾ. ಶ್ರೀಧರ ಎನ್. ಭಟ್ಟ, ಸಹಪ್ರಾಧ್ಯಾಪಕರು, ಎಸ್. ಡಿ. ಎಮ್., ಕಾಲೇಜು, ಉಜಿರೆ, 9448335652 | 512-516 |


**************

…ATOR
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

Volume XXI : January to June – 2023, ISSN 2250-1711
Journal of Veda Samskrita Academy [Recognised in the UGC-CARE List]

# ಕನ್ನಡದಲ್ಲಿ ಪುರಾಣ ಕಾವ್ಯಗಳ ಸ್ವರೂಪ

ಡಾ. ಎ. ವ್ಹಿ. ದೇವಾಂಗಮಠ, ಎಂ.ಎ., ಪಿ. ಎಚ್‌ಡಿ
ಕನ್ನಡ ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ವಿಭಾಗ
ಕೆ. ಎಲ್. ಇ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ,
ಗದಗ– 582101, ಕರ್ನಾಟಕ
Contact No. : 9880042368
E-mail : avdevangmath@gmail.com

ಭಾರತೀಯರ ಜೀವನದಲ್ಲಿ ಧರ್ಮ ಮತ್ತು ಆಧ್ಯಾತ್ಮಿಕತೆಗಳು ಬೀರಿದಷ್ಟು ಪ್ರಭಾವ ಮತ್ತು ಅರಿವುಗಳನ್ನು ಬೇರಾವುದೂ ಮಾಡಿರುವುದಿಲ್ಲ. ಅವರ ಬದುಕಿನ ಏರಿಳಿತಗಳಿಗೂ ಅದುವೇ ಕಾರಣ. ಸಾಹಿತ್ಯದ ಕ್ಷೇತ್ರದಲ್ಲಂತೂ ಕೆಲವಡೆ ಸಾಹಿತ್ಯ ಕಲೆಯನ್ನೇ ಮರೆಮಾಚುವಂತೆ ಧರ್ಮದ ಆವರಣ ಇದೆ. ಭಾರತೀಯ ಸಂದರ್ಭದಲ್ಲಿ 'ಧಾರ್ಮಿಕ ಸಾಹಿತ್ಯವೇ ಸಾಹಿತ್ಯ'ವೇ ಮುನ್ನಲೆಯಲ್ಲಿ ಬೆಳೆದು ಬಂದಿತು. ಅವುಗಳಲ್ಲಿ ಪುರಾಣ ಸಾಹಿತ್ಯವು ಒಂದು ಎರಡು ಸಾವಿರ ವರ್ಷಗಳಿಗಿಂತಲೂ ಹೆಚ್ಚಾಗಿ ಭಾರತೀಯ ಜೀವನದಲ್ಲಿ ಪುರಾಣಗಳು ಮಹತ್ವದ ಪಾತ್ರಗಳನ್ನಾಡಿವೆ. ಅತಿ ಉನ್ನತ ಮಟ್ಟದ ಋಷಿಗಳ ಪ್ರಜ್ಞೆಯನ್ನು ಸಾಮಾನ್ಯ ಮನುಷ್ಯನಿಗೆ ಮನವರಿಕೆಯಾಗುವಂತೆ ಪುರಾಣಗಳು ಮಾಡಿವೆ. ಗ್ರೀಕ್‌ರಲ್ಲಿಯೂ ಪುರಾಣ ಸಾಹಿತ್ಯ ವಿಪುಲವಾಗಿದೆ. ಮರೆಯಾದ ನಾಗರೀಕತೆಗಳಲ್ಲಿ ಈಜಿಪ್ತ ಮಾಯಾ (ದಕ್ಷಿಣ ಅಮೇರಿಕಾ) ಜನಾಂಗಗಳಲ್ಲಿ, ಚೀನಾ ದೇಶದಲ್ಲಿ ಪುರಾಣ ಪರಂಪರೆಗಳಿದ್ದವು.

'ಪುರಾಣ' ಶಬ್ದವು ಸಂಸ್ಕೃತ ಮೂಲದ್ದಾಗಿದ್ದು, 'ಹಳೆಯ' ಎಂಬ ಅರ್ಥವನ್ನು ನೀಡುತ್ತದೆ. ಹಳೆಯ ಕಾಲದ, ಉದ್ದವಾದ, ಜೀರ್ಣ, ನಡೆದು ಹೋದ, ಪ್ರಾಚೀನ ಸಾಹಿತ್ಯ, ದೀರ್ಘಕತೆ, ಹರಟೆ ಮೊದಲಾದ ಅರ್ಥಗಳನ್ನು ಪುರಾಣ ಶಬ್ದವು ಹೊಂದಿದೆ. 'ಪುರಾಣ' ಹೆಸರಿನೊಂದಿಗೆ ೧೮ ಮುಖ್ಯ ಮತ್ತು ೧೮ ಉಪ ಪುರಾಣಗಳಿವೆ. ಭಾರತದಲ್ಲಿ ಪೂರ್ಣ ಪ್ರಮಾಣದ ಪುರಾಣ ಸಾಹಿತ್ಯದ ಉಗಮ ವಿಕಾಸವನ್ನು ತ್ರಿಮೂರ್ತಿ ಆರಾಧನೆಯಲ್ಲಿ ವಾಸ್ತವವಾಗಿ ಗುರುತಿಸಬಹುದು. ಪುರಾಣಗಳು ಬಹುಪಾಲು ವಿಷ್ಣುವಿನ ದಶಾವತಾರಗಳನ್ನು ವರ್ಣಿಸುತ್ತವೆ. ಜೈನರಲ್ಲಿಯೂ ಪುರಾಣಗಳಿವೆ. ಇವುಗಳಿಗೆ ಹಿಂದೂ ಪುರಾಣಗಳು ಪ್ರೇರಣೆ ನೀಡಿರಬಹುದು. ತಮ್ಮ ಧರ್ಮದ ಮಹಾಪುರುಷರನ್ನು ಚಿತ್ರಿಸುವದು. ಬೌದ್ಧ ಧರ್ಮದಲ್ಲಿ ಬುದ್ಧನ ಚರಿತ್ರೆಯೂ ಪುರಾಣ ರೂಪದಲ್ಲಿದೆ. "ಪುರಾಣ ಸಾಹಿತ್ಯವು ಮೊದಲು ದೈವಿ ಲೀಲೆಗಳನ್ನು ಹೇಳುತ್ತ ಭಕ್ತಿಯನ್ನುಂಟು ಮಾಡಲು ನಿರ್ಮಾಣಗೊಂಡಿತು ಎಂದು ತಿಳಿದು ಬರುವದು. ಅನಂತರ ಅವುಗಳು ಅನೇಕ ಜನ ಜ್ಞಾನ ವಿಷಯಗಳನ್ನು ಒಳಗೊಳ್ಳುತ್ತ ಸಾಗಿದವು. ಅವು ವಿಶ್ವಕೋಶದಂತೆ ಬೆಳೆದವು. ಅವುಗಳಲ್ಲಿ ದೇವತಾ ಸ್ತೋತ್ರದಂತೆ ಧರ್ಮ ವಿಚಾರಗಳು, ಸಾಮಾಜಿಕ ವಿಷಯಗಳು ಪ್ರಸ್ತಾಪನೆಗೊಂಡವು. ಕಾಲದಿಂದ ಕಾಲಕ್ಕೆ ಪುರಾಣಗಳನ್ನು ಪರಿಷ್ಕರಿಸುವದನ್ನು ಕಾಣಬಹುದು. ಭಾಗವತ ಪುರಾಣದಲ್ಲಿ ಪುರಾಣಗಳು ಒಳಗೊಳ್ಳುವ ಹತ್ತು ವಿಷಯಗಳನ್ನು ಹೀಗೆ ತಿಳಿಸಲಾಗಿದೆ."[೧]

ಸಂಸ್ಕೃತದಲ್ಲಿ ಬೆಳೆದು ಬಂದ ಪುರಾಣಗಳನ್ನು ಭಕ್ತಿ ಪ್ರೇರಿತವಾಗಿ ರಚಿಸಲಾಯಿತು. ಆದರೆ ಅವುಗಳು ಬರಿ ವೇದಗಳಂತೆ 'ಸ್ತುತಿ' ಮಾತ್ರವಾಗಿರದೆ ಮಾನವ ಬದುಕಿನ ಮಾರ್ಗದರ್ಶನ ಸೂತ್ರಗಳನ್ನು; ಮಾನವ ಜೀವಿಗಳಿಗೆ ಅಗತ್ಯವಾದ ಪರ ಮತ್ತು ಲೌಕಿಕ ವಿಷಯಗಳನ್ನು ನಿರೂಪಿಸಿದವು. ಆ ಮೂಲಕವಾಗಿ ಅವು ವಿಷಯ ವಸ್ತುಕೋಶದಂತಾದವು. ಅವು ಒಳಗೊಳ್ಳುವ ವಿಷಯ ಸ್ವರೂಪವನ್ನು ಕೆಳಗಿನಂತೆ ಕಾಣಬಹುದು. ಭಾರತದಲ್ಲಿ ಪುರಾಣಗಳು ಸಂಸ್ಕೃತಿ ಮತ್ತು ಜನಾಂಗೀಯ ಬಾಂಧವ್ಯವನ್ನು ಉಂಟುಮಾಡಿದವು. ದ್ರಾವಿಡ ಆರ್ಯ ಧಾರ್ಮಿಕ ತತ್ತ್ವಗಳ ಮಹಾಸಂಗಮವೇ ಪುರಾಣಗಳು. ಇಲ್ಲಿಂದ ಮುಂದೆ ಭಕ್ತಿಗೆ ಮತ್ತು ಶೈವ–ವೈಷ್ಣವ ಆರಾಧನೆಗೆ ಚಾಲನೆ ದೊರೆಯಿತು. ಭಾರತದ ಉದ್ದಗಲದ ವೈವಿದ್ಯತೆಯಲ್ಲಿ ಏಕತೆಯನ್ನು ತರುವದು ಇವುಗಳ ಮಹತ್ವದ ಕಾರ್ಯವಾಯಿತು.

೧೫೦೦ ವರ್ಷಗಳ ವಿಶಾಲತೆಯುಳ್ಳ ಕನ್ನಡ ಸಾಹಿತ್ಯದಲ್ಲಿ ಭಾಷಾ ಶೈಲಿಯ ದೃಷ್ಟಿಯಿಂದ ಮೂರು ಮುಖ್ಯ ಅವಸ್ಥೆಗಳು ಕಂಡು ಬಂದಿವೆ. ಪುರಾಣಕಾವ್ಯ ಸಾಹಿತ್ಯವು ಈ ಪ್ರಮುಖ ಮೂರು ಅವಸ್ಥೆಯಲ್ಲಿ ಒಡಮೂಡಿದೆ. ಹಳಗನ್ನಡದಲ್ಲಿ ಜೈನಪುರಾಣ ಕಾವ್ಯಪರಂಪರೆ, ನಡುಗನ್ನಡದಲ್ಲಿ ವೀರಶೈವಪುರಾಣ ಕಾವ್ಯಪರಂಪರೆ, ಹೊಸಗನ್ನಡದಲ್ಲಿ ಪ್ರವಚನಪುರಾಣ ಕಾವ್ಯಪರಂಪರೆಗಳು ಬೆಳೆದುಬಂದಿವೆ. ಜೈನಧರ್ಮ ತತ್ತ್ವಗಳನ್ನು ಹೊಂದಿ ಆಗಮಿಕ ಕಾವ್ಯಗಳೆಂದು ಜೈನರು ಪುರಾಣ ಕಾವ್ಯಗಳನ್ನು ಬರೆದರು. ಆ ಕಾವ್ಯಗಳ ವಸ್ತು ವಿಷಯ ತಾತ್ವಿಕ ವಿವೇಚನೆಗಳೆಲ್ಲವು ಸಂಸ್ಕೃತ ಪ್ರಾಕೃತ ಕರ್ನಾಟಕೇತರ ಮೂಲವಾದದ್ದು. ಮುಂದಿನ ನಡುಗನ್ನಡ ಮತ್ತು ಹೊಸಗನ್ನಡ ಪುರಾಣ ಕಾವ್ಯಗಳು ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದ ವೀರಶೈವ–ಲಿಂಗಾಯತ ಮತ್ತಿತರ ಆಧ್ಯಾತ್ಮ ತಾತ್ವಿಕ ಧಾರೆಗಳನ್ನು ಒಳಗೊಂಡು ಮೂಡಿ ಬಂದಿವೆ. ಒಂದು ಅರ್ಥದಲ್ಲಿ ಜನಮುಖಿ ಮತ್ತು ಕನ್ನಡದೇತತ್ವಗಳು ಇಲ್ಲಿ ಪ್ರಮುಖವಾಗಿ ಪ್ರಕಟಗೊಂಡಿವೆ ಎನಿಸುವುದು. ಹೊಸಗನ್ನಡದ ಆಧುನಿಕ ಸಾಹಿತ್ಯದಲ್ಲಿ ಅನೇಕ ತಾತ್ವಿಕ ಸಾಹಿತ್ಯಕ ಹೊಸತನದ ನಡುವೆ ಈ ಪುರಾಣ ಕಾವ್ಯಗಳು ಪರಂಪರೆಯಾಗಿ ಮೂಡಿಬಂದುದು ವಿಶೇಷವೆನಿಸಿದೆ. ಉತ್ತರ ಭಾರತದ ಜೈನ ಧರ್ಮವು ಕ್ರಿ.ಶ. ಪೂರ್ವ ೨ನೇಯ ಶತಮಾನದಷ್ಟು ಹೊತ್ತಿಗೆ ಕರ್ನಾಟಕಕ್ಕೆ ಕಾಲಿಟ್ಟು ಬೆಳೆಯತೊಡಗಿತು.

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ಒಂದೆಡೆ ತಿರುಳ್ಗನ್ನಡದ ಕೊಪ್ಪಳ ಇನ್ನೊಂದೆಡೆ ಕಪ್ಪು (ಶ್ರವಣಬೆಳಗೊಳ) ಇವು ಜೈನ ಕೇಂದ್ರಗಳಾಗಿದ್ದವು. ಒಂದು ಕಾಲಕ್ಕೆ ಜೈನ ಧರ್ಮವು ರಾಜಧರ್ಮವಾಗಿತ್ತು. ಸಾಹಿತ್ಯದ ಬಹುಮುಖ್ಯವಾದ ಶಕ್ತಿಯಾಗಿಯೂ ಜೈನಧರ್ಮ ಬೆಳೆದು ಬಂದಿತು. ಪಂಪನು ತನ್ನ ಭಾವಶಕ್ತಿಯಾದ ವೀರವನ್ನು ಒಂದು ಕಾವ್ಯಕ್ಕೆ ಹೊಂದಿಸಿಕೊಂಡು, ಆತ್ಮ ಶಕ್ತಿಯಾದ ಜೈನ ತತ್ತ್ವ ವಿವೇಚನೆಯನ್ನು ಪ್ರಮುಖವಾಗಿಸಿದ ಎರಡರಲ್ಲಿಯೂ ಕಾವ್ಯಕಲೆಯನ್ನು ಕೈ ಬಿಡಲಿಲ್ಲ. ಅದನ್ನು 'ನೆಗಪ್ದಾದಿಪುರಾಣದೊಳರಿವುದು ಧರ್ಮಮುಂ ಕಾವ್ಯ ಧರ್ಮಮುಮಂ' ಎಂದು ಹೇಳಿರುವನು.

ಚಾವುಂಡರಾಯ ಪುರಾಣ (ಕ್ರಿ.ಶ.೧೦೦೦)ವು ಬರಿ ಜೈನ ಧರ್ಮವನ್ನು ತಿಳಿಸುವ ಕೃತಿಯಾಗಿ ತಾತ್ವಿಕ ಪ್ರಾಬಲ್ಯತೆಯನ್ನು ಹೊಂದಿತು. ಜೈನ ಧರ್ಮದ ತ್ರಿಷಷ್ಠಿ ಶಲಾಖಾ ಪುರುಷರನ್ನು ಕುರಿತು ಪೌರಾಣಿಕ ವಿಷಯಗಳನ್ನು 'ಚಾವುಂಡರಾಯ ಪುರಾಣ'ವು ಹೊಂದಿ ೧೧ನೇಯ ಶತಮಾನಾನಂತರ ಜೈನ ಕವಿಗಳು ಆಗಮಿಕ ಮತ್ತು ಲೌಕಿಕಗಳೆರಡನ್ನು ಕೂಡಿಸಿ ಧಾರ್ಮಿಕ ಮಾರ್ಗ ಒಂದನ್ನೆ ಆಯ್ದುಕೊಂಡರು. ಇದರ ಆರಂಭ ನಾಗಚಂದ್ರ.ಆತ ರಾಮಾಯಣದ ಕಾವ್ಯ ಬರೆದ, ಆದರೆ ಅದು ಜೈನ ರಾಮಾಯಣವಾಗಿದೆ. ಈ ಪದ್ಧತಿಯನ್ನು ನೇಮಿನಾಥ ಜನ್ನ ಮೊದಲಾದವರು ಅನುಸರಿಸಿದರು. ಉದ್ದಕ್ಕೂ ಈ ಎಲ್ಲರೂ ಜೈನ ಧರ್ಮದ ವಿವೇಚನೆಯಾಗಿ ಪುರಾಣ ಕಾವ್ಯಗಳನ್ನು ಬರೆದಿರುವದನ್ನು ಕಾಣಬಹುದು. ಆದಿಪುರಾಣ, ಶಾಂತಿಪುರಾಣ, ಅಜಿತಪುರಾಣ, ಮಲ್ಲಿನಾಥಪುರಾಣ, ನೇಮಿನಾಥಪುರಾಣ, ಅನಂತನಾಥಪುರಾಣ, ಪಾರ್ಶ್ವನಾಥ ಪುರಾಣ ಇವೆಲ್ಲ ಪ್ರಮುಖ ಪುರಾಣಗಳನ್ನು ಈ ಮಾಲಿಕೆಯಲ್ಲಿ ನೋಡಬಹುದು. ಪುರಾಣ ವಿಷಯವನ್ನು ಕೈ ಬಿಟ್ಟವನು ರತ್ನಾಕರವರ್ಣಿ. ಆತ ಪುರಾಣೋಕ್ತ ಭರತನ ಕತೆಯನ್ನೆ ವಸ್ತುವಾಗಿ ಕಾವ್ಯವನ್ನು ಬರೆದು ಅಲ್ಲಲ್ಲಿ ತತ್ತ್ವಗಳನ್ನು ಹೇಳಿದರೂ, ಅದೊಂದು ಬದ್ಧ ಧಾರ್ಮಿಕ ಕೃತಿಯಲ್ಲ. ಜೈನಪುರಾಣ ಕಾವ್ಯಗಳ ವಸ್ತು ಉತ್ತರ ಭಾರತದ ಜೈನ ಧರ್ಮವಾದರೂ, ಕರ್ನಾಟಕದ ಋಷಿ ಸ್ವಾಮಿಗಳನ್ನು, ಸಾಂಸ್ಕೃತಿಕ ಧಾರ್ಮಿಕ ವ್ಯಕ್ತಿಗಳನ್ನು ಹೊಗಳಿ ಹೇಳಿದ ಮಾತುಗಳು ಜೈನ ಧರ್ಮದ ಮಹತ್ವದ ದಾಖಲೆಯಾಗಿದೆ.

ಹಿಂದೂ ಪುರಾಣ ಸಾಹಿತ್ಯವೆಲ್ಲಾ ಹರಿಹರ ಹಿರಣ್ಯಗರ್ಭರ ಸ್ತುತಿಯಲ್ಲೇ ಹುಟ್ಟಿ ಬೆಳದಿದೆ. ಅವರು ಕಾಮನಿಗೆ ಸೋತುದು, ಜೈನ ಮುನಿಯೊಬ್ಬ ಕಾಮನನ್ನು ಗೆದೆಯುವದು, ಸೂಕ್ಷ್ಮವಾಗಿ ಸ್ವಮತ ಪ್ರಶಂಸೆ. ಕರ್ನಾಟಕದಲ್ಲಿ ಜೈನಧರ್ಮ ಇಳಿಮುಖವಾದಂತೆ ಜೈನ ಪುರಾಣಕಾವ್ಯಗಳು ಇಳಿಮುಖಗೊಂಡವು ಮುಂದೆ ನಡುಗನ್ನಡದಲ್ಲಿ ಜೈನ ಕವಿಗಳು ಮತವನ್ನು ಎತ್ತಿ ಹೇಳಿದರೂ ವಿಧಾನ-ತಾತ್ವಿಕತೆಯಲ್ಲಿ ಬೇರೆ ಮಾರ್ಗ ಅಭಿವ್ಯಕ್ತಿಯನ್ನು ಕಂಡುಕೊಂಡರು. ಕರ್ನಾಟಕದಲ್ಲಿ ಪ್ರಚುರಗೊಂಡ ಜೈನ ಪುರಾಣ ಕಾವ್ಯಗಳೇ ಕನ್ನಡ ಸಾಹಿತ್ಯದಲ್ಲಿ ಪ್ರಥಮ ಪುರಾಣ ಘಟ್ಟವಾಗಿದೆ. ಈ ಪುರಾಣ ಕಾವ್ಯಗಳು ಜೈನ-ಮತ-ತತ್ವ ವ್ಯಕ್ತಿ ಕೇಂದ್ರಿತವಾಗಿದ್ದವು. ಅರವತ್ತುಮೂರು ಶಲಾಖಾ ಪುರುಷರನ್ನು ಅವರ ಜೀವನವನ್ನು ನಿರೂಪಿಸುವವು. ಮುಖ್ಯವಾಗಿ ತೀರ್ಥಂಕರ ಚರಿತ್ರೆಗಳನ್ನು ಹೇಳುವವು. ಸಂಸ್ಕೃತದ ಮಹಾಪುರಾಣ ಪ್ರಾಕೃತದ 'ಪಉಮುಚರಿಯ' ಕೃತಿಗಳೇ ಮುಖ್ಯ ಆಕಾರಗಳಾಗಿವೆ.

ನಡುಗನ್ನಡದಲ್ಲಿ ವೀರಶೈವ ಪುರಾಣ ಕಾವ್ಯಗಳು ವ್ಯಾಪಕವಾಗಿ ಮೂಡಿಬಂದವು. "ನಡುಗನ್ನಡ ಸಾಹಿತ್ಯದ ತಲಕಾವೇರಿಯಾದ ವಚನ ಸಾಹಿತ್ಯದಲ್ಲಿ ಹಿಂದೂ ಪುರಾಣಗಳ ವಿರೋಧವಿದೆ. ಈ ರೀತಿ ವಿರೋಧವು ಸೈದ್ಧಾಂತಿಕ ಹಿನ್ನೆಲೆಹೊಂದಿದೆ. ಶರಣರು ಹೊಸದೊಂದು ಧರ್ಮವನ್ನು ಆಚರಣೆಗೆ ತಂದರು. ಅವರ ದೃಷ್ಟಿಯಲ್ಲಿ ಶೈವ ಪುರಾಣ ವೈಷ್ಣವ ಪುರಾಣಗಳೆಲ್ಲ ಸ್ಥಾವರವು, ಜಡ ರೂಪ. ಅವರು ಆಕಾರ ಸಾಕಾರ ಆರಾಧನೆಯನ್ನು ಒಪ್ಪದ್ದರಿಂದ ಹೀಗೆ ವಿರೋಧವನ್ನು ಹೇಳಿದರು."[೨] 'ಪುರಾಣವೆಂಬುದು ಪುಂಡರ ಗೋಷ್ಠಿ' – ಅಲ್ಲಮಪ್ರಭು, 'ಪುರಾಣಗಳನ್ನು ಆತ್ಮ ಮಾಡಿದನಲ್ಲದೆ; ಆತ್ಮನನು ಅವು ಮಾಡಿಲ್ಲ ! – ಉರಿಲಿಂಗದೇವ. 'ಪುರಾಣ ಪೂರೈಸಲರಿಯದೆ ಕೆಟ್ಟವು' –ಅಲ್ಲಮಪ್ರಭು, ವೇದ ಶಾಸ್ತ್ರಾಗಮ ಪುರಾತನರ ಮುಂದಿಟ್ಟುಕೊಂಡ ಜಡವಾದಿಗಳ ಮೆಚ್ಚ-ಚೆನ್ನಬಸವಣ್ಣ, ಈ ರೀತಿಯಾಗಿ ಶರಣರು ವೇದಾಗಮ ಪುರಾಣ ಮಾರ್ಗವನ್ನು ವಿರೋಧಿಸಿದರು. ಅವರು ಸ್ಥಾವರ ಆರಾಧನೆಯನ್ನು ವಿರೋಧಿಸಿ 'ಪರಾತ್ಪರ'ದ ಆತ್ಮದ ಅರಿವನ್ನು ಎತ್ತಿ ಹೇಳಿದರು. ಅವರದು 'ದಯವೇ ಧರ್ಮದ ಮೂಲ', ಅದನ್ನು ಬಳಿವಿಡಿದು ಭಕ್ತಿ-ಅರಿವು-ಜ್ಞಾನಗಳನ್ನು ಹೊಂದಬೇಕೆಂದರು. ಶರಣರದ್ದು ಕರ್ಮಪರವಾದ ಆಚರಣೆಯ ಭಕ್ತಿಯಲ್ಲ, ಅದು ಅಂತಃಕರಣದ ಅರಿವಿನ ಭಕ್ತಿ. ಈ ಎಲ್ಲ ಹಿನ್ನೆಲೆಯಲ್ಲಿ ಶರಣರು ತಾತ್ವಿಕ ತಳಹದಿಯ ಮೇಲೆ ಪುರಾಣಗಳನ್ನು ಒಪ್ಪಲಿಲ್ಲ, ವಿರೋಧಿಸಿದರು. ಅಸಂಗತಿ ಮತ್ತು ಅಚ್ಚರಿ ಎಂದರೆ ಶರಣರ ಜೀವನವನ್ನೇ ಮುಂದೆ ಪುರಾಣಕ್ಕೆ ಹೊಂದಿಸಿ ವೀರಶೈವ ಪುರಾಣ ಕಾವ್ಯ ಪರಂಪರೆ ಹುಟ್ಟಿ ಬೆಳೆಯಿತು. ಅದು ತೆಲುಗು ಪುರಾಣ ಕಾವ್ಯ ಪದ್ಧತಿಯಂತೆ ಬೆಳೆಯಿತು.

ಶರಣರ ಸಮೀಪದ ಕಾಲದಲ್ಲಿ ಬದುಕಿದವರು ಹರಿಹರ ಮತ್ತು ತೆಲುಗಿನ ಪಾಲ್ಕುರಿಕೆ ಸೋಮನಾಥರು. ಅರ್ಧ ಶತಮಾನ ಕಳೆಯುವದರಲ್ಲಿ ಶರಣರ ಜೀವನ-ಸಾಧನೆಗಳನ್ನು ಲೀಲೆ ಎಂದು ಪರಿಕಲ್ಪಿಸಿ ಹೇಳಿದರು. ಶರಣರು ಪುರಾಣ ಪದ್ಧತಿಯನ್ನು ವಿರೋಧಿಸಿದ್ದರು. ಮೂರ್ತಿ ಪೂಜೆ, ವ್ಯಕ್ತಿ ಪೂಜೆಗಳನ್ನು ಪ್ರತಿರೋಧಿಸಿದ್ದರು. ಮುಂದೆ ಅವರ ಜೀವನವನ್ನು ಕಾವ್ಯಕ್ಕೆ ವಸ್ತುವನ್ನಾಗಿಸಿಕೊಂಡ ಪರಿಭಾವಿಸಿದ ವೈಪರಿತ್ಯಗಳು ಕಂಡವು. ಈ ಹಿನ್ನೆಲೆಯಲ್ಲಿ ವೀರಶೈವ ಪುರಾಣಗಳು ಹುಟ್ಟಿಬಂದವು.

ವೀರಶೈವ ಕಾವ್ಯ ಮಾರ್ಗವು ಹರಿಹರನಲ್ಲಿ ಉದಿತಮಾರ್ಗವಾಗಿ ಭಕ್ತಿ ಕೇಂದ್ರಿತವಾಗಿ ಮೂಡಿ ಬಂದಿತು. ಪಾಲ್ಕುರಿಕೆ ಸೋಮನಾಥನಲ್ಲಿ ಲೀಲಾ ಮಾರ್ಗವಾಗಿ ರೂಪುಗೊಂಡಿತು. ಹರಿಹರನು ಬಸವಣ್ಣನೆ ಮೊದಲಾದ ಶರಣರ ಚರಿತ್ರೆಗಳನ್ನು ಕಾವ್ಯದ ತಾತ್ವಿಕ ಹಿನ್ನೆಲೆಯಲ್ಲಿ ನಿರೂಪಿಸಿದನು. ಶರಣರ 'ಸಾಮರ್ಥ್ಯಂಗಳ' ತೋರುವ 'ಪ್ರತ್ಯಕ್ಷಂಗಳ'ನ್ನು ನಿರೂಪಿಸುವದು ಆತನ ಗುರಿ-

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101

ಯಾಯಿತು. ಹರಿಹರನು ಶಿವನನ್ನು ಶಿವಲೀಲೆಗಳನ್ನು ಅಲ್ಪ ಪ್ರಮಾಣದಲ್ಲಿ; ಶರಣರ ಚರಿತ್ರೆಗಳನ್ನು ಹಿರಿಯ ಪ್ರಮಾಣದಲ್ಲಿ ರಚಿಸಿದನು. ಗಿರಿಜಾ ಕಲ್ಯಾಣವು ಶಿವಲೀಲೆಯ ಕತೆಯನ್ನ ಹೊಂದಿದರೂ, ಅದು ಭಕ್ತಿಯ ವಿವೇಚನೆಯನ್ನು ಮುಖವಾಗಿಸಿದ ಕಾವ್ಯ. ವಾಸ್ತವವಾಗಿ ವೀರಶೈವ ಪುರಾಣ ಕಾವ್ಯದ ಗಂಗೋತ್ರಿಯಾಗಿ ತೆಲಗಿನ ಪಾಲ್ಕುರಿಕೆ ಸೋಮನಾಥನ 'ಬಸವ ಪುರಾಣಮು' ಕಾವ್ಯವಿದೆ. ಅಲ್ಲಿ 'ಬಸವ ಚರಿತ್ರೆ'ಯನ್ನು ಮಾತ್ರ ಹೇಳದೆ ಸಕಲ ಶರಣಗಣದ ಚರಿತೆಗಳನ್ನು ಪುರಾಣ ಮಾರ್ಗದಲ್ಲಿ ಹೇಳಿರುವದನ್ನು ಕಾಣಬಹುದು. ಸೋಮನಾಥನು ತನ್ನ ಪುರಾಣದ ಹಿನ್ನೆಲೆಯನ್ನು ಪುರಾಣ ಮಾರ್ಗವೆಂದು ಸ್ಪಷ್ಟಪಡಿಸಿರುವನು. ಈ ಕಾವ್ಯವನ್ನು ಭೀಮಕವಿಯು ಕನ್ನಡಕ್ಕೆ ಅನುವಾದಿಸಿದನು.

ಭೀಮಕವಿಯಿಂದ ಮೊದಲ್ಗೊಂಡ ವೀರಶೈವ ಪುರಾಣ ಕಾವ್ಯ ಪರಂಪರೆಯಲ್ಲಿ ಪದ್ಮಣಾಂಕ (ಕ್ರಿ.ಶ.೧೮೦೦), ಗುಬ್ಬಿಯ ಮಲ್ಲಣಾರ್ಯ (ಕ್ರಿ.ಶ.೧೫೩೦), ಚನ್ನಬಸವಾಂಕ (ಕ್ರಿ.ಶ.೧೫೫೦), ವಿರಕ್ತ ತೋಂಟದಾರ್ಯ (ಕ್ರಿ.ಶ. ೧೫೬೦), ಶಾಂತೇಶ (ಕ್ರಿ.ಶ. ೧೫೬೧), ಅದೃಶ್ಯ ಕವಿ (ಕ್ರಿ.ಶ.೧೫೮೦), ವಿರೂಪಾಕ್ಷ ಪಂಡಿತ (ಕ್ರಿ.ಶ.೧೫೮೪), ಸಿದ್ಧಲಿಂಗ ಶಿವಯೋಗಿ (ಕ್ರಿ.ಶ.೧೬೦೦), ಬಸವಲಿಂಗ (೧೬೧೧), ಬಸವಲಿಂಗ (ಕ್ರಿ.ಶ.೧೬೭೯), ಪರ್ವತೇಶ್ವರ (೧೬೯೮), ಚನ್ನಬಸವ (೧೮೨೬), ಬಸವ (೧೮೬೦), ಚನ್ನಬಸವ (೧೮೬೦), ದ್ಯಾಂಪೂರ ಚನ್ನಕವಿ (೧೯೪೦) ಮೊದಲಾದವರು ಕಾವ್ಯಗಳನ್ನು ರಚಿಸಿದರು. ಇವರು ಶರಣರನ್ನು, ಶಿವಲೀಲೆಗಳನ್ನು ವೀರಶೈವ ತತ್ವಗಳನ್ನು ಪುರಾಣ ರೂಪದಲ್ಲಿ ಹೇಳಿದರು.

ವೀರಶೈವ ಪುರಾಣ ಕಾವ್ಯಗಳು ಇತರ ಪುರಾಣಗಳಿಂಗಿಂತ ಕೆಲವೊಂದು ವಿಭಿನ್ನ ಲಕ್ಷಣಗಳನ್ನು ಪಡೆದಿರುತ್ತವೆ. ಆ ಲಕ್ಷಣಗಳನ್ನು ಎಂ.ಆರ್ ಶ್ರೀನಿವಾಸಮೂರ್ತಿಗಳು ಹೀಗೆ ಕ್ರೋಢಿಕರಿಸಿದ್ದಾರೆ. "೧. ಕೈಲಾಸದ ವರ್ಣನೆ, ಈಶ್ವರನ ಸ್ಥಾನ ೨. ಕಾರಣ ಪುರುಷರ ಪ್ರಸ್ತಾಪ ೩. ಪವಾಡಗಳು ೪. ಸ್ತ್ರೀವಾಧಿಕ್ಯತೆ ೫. ಸೃಷ್ಟಿಯ ನಿರೂಪಣೆ ೬. ವೀರಶೈವ ಮತಾಧಿಕ್ಯತೆ ೭. ಅಷ್ಟಾವರಣಗಳ ಮಹಾತ್ಮೆ ೮. ಭಕ್ತರ ಹಿರಿಮೆ ೯. ಕಥಾನಾಯಕನ ಮುಕ್ತಿ"[3] ಇದೇ ಲಕ್ಷಣಗಳನ್ನು ವೀರಶೈವ ಪುರಾಣಗಳು ಒಳಗೊಳ್ಳುತ್ತವೆಯೆಂದು ತಿಳಿಸುವರು. ಶಿವತತ್ತ್ವಚಿಂತಾಮಣಿಯಲ್ಲಿ ವೀರಶೈವ ಪುರಾಣಗಳಿಗೆ ೧೮ ಲಕ್ಷಣಗಳಿವೆ ಎಂದು ತಿಳಿಸುತ್ತ ಪರವಸ್ತು, ಗುರು-ಲಿಂಗ-ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ, ಸೃಷ್ಟಿ, ಗಣಚರಿತೆ, ಪುರಾತನರ ಚರಿತೆ, ನೂತನರ ಚರಿತೆ, ಗಣಸಹಸ್ರನಾಮ, ವೀರಶೈವಾಧಿಕ್ಯ, ವೀರಶೈವ ತತ್ವ ನಿರೂಪಣೆ ಷಟ್‌ಸ್ಥಲ, ಕಾಲಾಜ್ಞಾನ, ಪಂಚಾಚಾರ ಹೀಗೆ ಹದಿನೆಂಟರ ವಿವರಣೆ ಅಲ್ಲಿದೆ. ಈ ಕಾಲಘಟ್ಟದಲ್ಲಿ ಕ್ರಿ.ಶ. ೧೫೦೦ರಿಂದ ಪುರಾಣ ಕಾವ್ಯಕ್ಕೆ ಇನ್ನೊಂದು ಆಯಾಮ ಒದಗಿ ಬಂದಿತು. ಮಠದ ಸ್ವಾಮಿಗಳ ಚರಿತ್ರೆಯನ್ನು ನಿರೂಪಿಸುವ ಕ್ರಮವು ಪ್ರಾರಂಭವಾಯಿತು. 'ದ್ವಿತೀಯಅಲ್ಲಮ'ನೆಂದು ಪ್ರಖ್ಯಾತನಾದ ಶ್ರೀತೋಂಟದ ಸಿದ್ಧಲಿಂಗಯತಿಗಳು ಶಿಷ್ಯರೊಂದಿಗೆ ಮೈಸೂರು ಪ್ರಾಂಥದಲ್ಲಿ ವೀರಶೈವ ಲಿಂಗವಂತ ಧರ್ಮ ಪ್ರಚಾರ ಮಾಡಿದರು. ಅವರ ಸ್ವಯಂ ಷಟ್‌ಸ್ಥಲಗಳ ವಿವೇಚನೆ ಮಾಡಿ 'ಷಟ್‌ಸ್ಥಲ ಜ್ಞಾನ ಸಾರಾಮೃತ'ವೆಂಬ ವಚನಗಳನ್ನು ಬರೆದರು. ಅವರ ಬದುಕಿನ ಭವ್ಯತೆಯನ್ನು ಕುರಿತು ಅವರ ಶಿಷ್ಯರಾದ ವಿರಕ್ತ ತೋಂಟದಾರ್ಯನು ೧೫೬೦ರಲ್ಲಿ ಶಿದ್ಧೇಶ್ವರ ಪುರಾಣವನ್ನು, ಶಾಂತೇಶನು ೧೫೬೧ರಲ್ಲಿ ತೋಂಟದ ಸಿದ್ಧೇಶ್ವರ ಪುರಾಣಗಳನ್ನು ಬರೆದರು. ಇದರಿಂದ ಮಠ ಪರಂಪರೆಯನ್ನು ಸ್ವಾಮಿಗಳ ಉದಾತ್ತ ಚರಿತ್ರೆಗಳನ್ನು ಬರೆಯುವದಕ್ಕೆ ಇದು ಆರಂಭವೆನಿಸಿತು. ಇದರಿಂದ ಮುಂದುವರೆದ ಭಾಗವೇ ಅಲ್ಲಲ್ಲಿ ಕಾಣಿಸಿಕೊಂಡಿತು. ೨೦ನೇಯ ಶತಮಾನದಲ್ಲಿ ದ್ಯಾಂಪೂರ ಚನ್ನಕವಿಗಳಲ್ಲಿ ಪುರಾಣ ಕಾವ್ಯಗಳ ಹೆಚ್ಚಳ ಕಂಡಿತು. ಚನ್ನಕವಿ, ಪಂ.ವೈ.ನಾಗೇಶಶಾಸ್ತ್ರಿಗಳು, ಕಲ್ಲಿನಾಥ ಶಾಸ್ತ್ರೀಗಳು, ಪಂ.ಸದಾಶಿವಶಾಸ್ತ್ರೀಗಳು, ಪಂ.ಪುಟ್ಟರಾಜ ಕವಿಗಳು, ಶ್ರೀ.ಮಲ್ಲಿಕಾರ್ಜುನ ಮೊದಲಾದವರು ಮೊದಲ ಹಂತದ ಕವಿಗಳಾಗಿ ಕಾಣಿಸಿದರು.

**ಅಡಿಟಿಪ್ಪಣಿಗಳು :**

೦೧. ಪುಟ – ೧೮೪, ಯುಗಯಾತ್ರಿ ಭಾರತೀಯ ಸಂಸ್ಕೃತಿ ಸಂಪುಟ-೨

೦೨. ಪುಟ – ೧೨, ವಚನ ಸಾಹಿತ್ಯ ಸಂಗ್ರಹ, (ಸಂ) ಸಂ.ಶಿ. ಭೂಸನೂರಮಠ

೦೩. ಪುಟ– ೧೪೪, ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ

**ಪರಾಮರ್ಶನ ಕೃತಿಗಳು :**

೦೧. ಗೋಪಾಲಯ್ಯ, ಕೆ. ಎಲ್, ಕನ್ನಡ ಸಾಹಿತ್ಯದಲ್ಲಿ ಪುರಾಣಪ್ರಜ್ಞೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮, ೧೯೮೮

೦೨. ನಾಗರಾಜಯ್ಯ ಹಂ.ಪ, ಚಾವುಂಡರಾಯ ಪುರಾಣ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮, ೧೯೮೦

೦೩. ಯುಗಯಾತ್ರಿ ಭಾರತೀಯ ಸಂಸ್ಕೃತಿ ಸಂಪುಟ-೧,೨. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು,೧೯೭೧

೦೪. ವಿದ್ಯಾಶಂಕರ ಎಸ್, ವೀರಶೈವ ಪುರಾಣಗಳು : ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮, ೧೯೮೩

***************

CO-ORDINATOR
IQAC
K.L.E.S' Arts & Commerce College
GADAG

PRINCIPAL
K.L.E. Society's
Arts & Commerce College
GADAG-BETGERI-582101